## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಗೊಟ್ಟಿಗೆರೆ ವಾರ್ಡ್ ಸಂಖ್ಯೆ-194,**

**ವಾರ್ಡ್ ಕಛೇರಿಯಲ್ಲಿ ದಿನಾಂಕ: 07-11-2020 ರಂದು ವಿಡಿಯೋ ಕಾನ್ಫರೆನ್ಸಿಂಗ್ ಮುಖಾಂತರ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿಗಳು.**

ದಿನಾಂಕ: 07-11-2020 ರಂದು ಬೆಳಿಗ್ಗೆ 11:00 ಘಂಟೆಗೆ Zoom Meeting ಮುಖೇನ ನಡೆಸಲಾದ ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿ ಹಾಗೂ ಸದಸ್ಯರುಗಳನ್ನು ಅಧ್ಯಕ್ಷರು ಹಾಗೂ ಕಾರ್ಯದರ್ಶಿ ರವರು ಸಭೆಗೆ ಸ್ವಾಗತಿಸುತ್ತಾ, ದಿನಾಂಕ: 17-10-2020 ರಂದು ನಡೆದ ಸಭೆಯಲ್ಲಿ ಚರ್ಚಿಸಲಾದ ವಿಷಯಗಳು ಹಾಗೂ ತೆಗೆದುಕೊಂಡ ಕ್ರಮದ ಬಗ್ಗೆ ಕೆಳಕಂಡಂತೆ ಚರ್ಚಿಸಲಾಯಿತು.

ಸದರಿ ಸಭೆಗೆ ಈ ಕೆಳಕಂಡ ಅಧಿಕಾರಿ ವರ್ಗ / ಸದಸ್ಯರು ಮತ್ತು ಸ್ಥಳೀಯ ನಾಗರೀಕರು ಹಾಜರಾಗಿದ್ದರು.

| ಕ್ರ.ಸಂ. | ಹೆಸರು (ಶ್ರೀ / ಶ್ರೀಮತಿ) | ಪದನಾಮ |
|---|---|---|
| 1. | ವಿ.ಕೆ ರಮಾಮಣಿ, ಕೆ.ಎಂ.ಎ.ಎಸ್ | ಉಪ ಆಯುಕ್ತರು (ಮಾಹಿತಿ ತಂತಜ್ಞಾನ), ಬಿಬಿಎಂಪಿ<br>ಅಧ್ಯಕ್ಷರು |
| 2. | ಶ್ರೀ ರಮೇಶ್.ಎಸ್, | ಹಿರಿಯ ಆರೋಗ್ಯ ಪರಿವೀಕ್ಷಕರು<br>ಕಾರ್ಯದರ್ಶಿ |
| 3. | ಡಾ॥ ಲಕ್ಷ್ಮೀಪತಿ, , ಪ್ರಾಥಮಿಕ ಆರೋಗ್ಯ ಕೇಂದ್ರ, ಗೊಟ್ಟಿಗೆರೆ | ಆರೋಗ್ಯ ವೈದ್ಯಾಧಿಕಾರಿ, |
| 4. | ಶ್ರೀ ಸಂತೋಷ್ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯಾ ನಿರ್ವಹನೆ ಬೆಂಗಳೂರು ದಕ್ಷಿಣ ವಿಭಾಗ ) |
| 5. | ಶ್ರೀ ವೆಂಕಟೇಶ್, | ಕಿರಿಯ ಆರೋಗ್ಯ ನಿರೀಕ್ಷಕರು, ಗೊಟ್ಟಿಗೆರೆ |
| 6. | ಶ್ರೀ ರಂಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಬಿ ಡಬ್ಲ್ಯೂ ಎಸ್ ಎಸ್ ಬಿ ) |
| 7. | ಶ್ರೀ ವೆಂಕಟೇಶ್, | ಸಬ್ ಇನ್ಸ್ಪೆಕ್ಟರ್ (ಕೋಣನಕುಂಟೆ ) |
| 8. | ಶ್ರೀ ರಮೇಶ್ | ಸಹಾಯಕ ಕಂದಾಯ ಅಧಿಕಾರಿ |

Scanned by CamScanner

| | | |
|---|---|---|
| | | |
| 9. | ಶ್ರೀ ಸುರೇಶ್ | ಕಂದಾಯ ಪರಿವೀಕ್ಷಕರು |
| 10. | ಶ್ರೀ ಕೃಷ್ಣಮೂರ್ತಿ | ಟ್ರಾಫಿಕ್ ಸಬ್ ಇನ್ಸಪೆಕ್ಟರ್ |
| 11. | ಶ್ರೀ ಬಾಲಾಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಎಸ್ ಡಬ್ಲ್ಯೂ ಡಿ ) |
| 12. | ಶ್ರೀ ಶ್ರೀಕಂಟೇಶ್ವರ | ಬೀದಿ ದೀಪಗಳ ಗುತ್ತಿಗೆದಾರರು |
| 13. | ಶ್ರೀ ರಂಗೇಗೌಡ, | ಅಧ್ಯಕ್ಷರು, South Avenue ಬಡಾವಣೆ |
| 14. | ಶ್ರೀ ಶಿವಕುಮಾರ್ ಗೌಡ, | ಜೆ.ಪಿ. ನಗರ 9ನೇ ಹಂತ |
| 15 | ಶ್ರೀ ಸೀತಾರಾಮ್ | ಅಧ್ಯಕ್ಷರು, Classic Orchards |
| 16 | ಶ್ರೀ ನಾಗರಾಜ್ ರಾವ್ .ಸಿ ಎಸ್ | ಪರಿವರ್ತನ ಸಂಘ, ರಾಯಲ್ ಕೌಂಟಿ |
| | | |

| ವಿಷಯ | ಸಭೆಯ ನಿರ್ಣಯ | ಕಾಲಾಅವಧಿ |
|---|---|---|
| **1.** (I) ಶ್ರೀ ರಂಗೇಗೌಡ, ಅಧ್ಯಕ್ಷರು, South Avenue ಬಡಾವಣೆ ರವರು ಹಿಂದಿನ ಎರಡು ಸಭೆಗಳಲ್ಲಿ ಕೋರಿರುವಂತೆ ತಮ್ಮ ಬಡಾವಣೆಯಲ್ಲಿ BWSSB ರವರು ಕೈಗೊಂಡಿರುವ ಒಳಚರಂಡಿ ಕಾಮಗಾರಿಯಿಂದ ತಮ್ಮ ರಸ್ತೆಗಳು ದುರಸ್ಥಿಗೊಂಡಿದ್ದು ಹಲವು ಸಾರ್ವಜನಿಕರು ಓಡಾಡುವಾಗ ಹಾಗೂ ವಾಹನದಲ್ಲಿ ಚಲಿಸುವಾಗ ಅಪಘಾತಗಳು ಸಂಭವಿಸಿದ್ದು ರಸ್ತೆ ಕಾಮಗಾರಿಯನ್ನು ತ್ವರಿತವಾಗಿ ಕೈಗೊಳ್ಳಲು ಕೋರಿರುತ್ತಾರೆ. | (I) AEE, BWSSB ರವರು ಒಳಚರಂಡಿ ಕಾಮಗಾರಿಯು ಪೂರ್ಣಪ್ರಮಾಣದಲ್ಲಿ ಮುಕ್ತಾಯಗೊಂಡಿರುವ ಬಗ್ಗೆ ವರದಿ ಸಲ್ಲಿಸುವುದು ಹಾಗೂ ಪಾಲಿಕೆಯ AEE/AE ರವರು ರಸ್ತೆ ಕಾಮಗಾರಿಯನ್ನು ಕೈಗೊಳ್ಳಲು ಅಗತ್ಯ ಕ್ರಮವಹಿಸುವುದು. | (I) AEE, BWSSB ರವರು ಪ್ರಗತಿ ಪೂರ್ಣಗೊಂಡಿರುವ ವರದಿ ಅನ್ನು ಮುಂದಿನ ವಾರದಲ್ಲಿ ಸಲ್ಲಿಸುವುದು. |
| **2. ಪರಿವರ್ತನ ಸಂಘ, ರಾಯಲ್ ಕೌಂಟಿ ರವರು ಈ ಕಳಕಂಡ ವಿಷಯಗಳ ಬಗ್ಗೆ ಮನವಿ ಸಲ್ಲಿಸಿರುತ್ತಾರೆ.** | | |
| (I) ರಸ್ತೆ ಪಾದಚಾರಿಗಳಲ್ಲಿರುವ | (I) ಹಿಂದಿನ ಸಭೆಯಲ್ಲಿಯು ಸಹ | (I) ಈ ತಿಂಗಳಿನಲ್ಲಿ |

Scanned by CamScanner

| | | |
|---|---|---|
| ವ್ಯಾಪಾರಿ ಅಂಗಡಿಗಳನ್ನು ತೆರವುಗೊಳಿಸುವ ಬಗ್ಗೆ | ಸದರಿ ವಿಷಯ ಪ್ರಸ್ತಾಪವಾಗಿದ್ದು, ಹಿರಿಯ ಆರೋಗ್ಯ ಪರಿವೀಕ್ಷಕ ಹಾಗೂ ತಂಡದವರು ಎಲ್ಲಾ ವ್ಯಾಪಾರಸ್ತರಿಗೆ/ರಸ್ತೆ ಪಾದಚಾರಿಯನ್ನು ತೆರವುಗೊಳಿಸಲು ಸೂಚಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಂಚಾರ ಪೊಲೀಸರು ಪಾಲಿಕೆಯ ಆರೋಗ್ಯ/ಕಂದಾಯ ತಂಡದವರೊಂದಿಗೆ ಮತ್ತೊಮ್ಮೆ ಭೇಟಿ ನೀಡಿ ತೆರವುಗೊಳಿಸುವುದಾಗಿ ತೀರ್ಮಾನಿಸಲಾಯಿತು. | ಈಗಾಗಲೇ ತೆರವು ಕಾರ್ಯಚರಣೆ ಪೂರ್ಣಗೊಳಿಸಲು ತೀರ್ಮಾನಿಸಲಾಯಿತು. |
| (II) ಖಾಲಿ ನಿವೇಶನಗಳಲ್ಲಿ ಮರಳು ಮಾರುತ್ತಿರುವುದು ಅಕ್ಕ ಪಕ್ಕದವರಿಗೆ ತೊಂದರೆಯಾಗುತ್ತಿರುವ ಬಗ್ಗೆ. | (II) 80 ಫೀಟ್ ಮುಖ್ಯ ರಸ್ತೆ ಯಲ್ಲಿ ನಡೆಸುತ್ತಿರುವ ಉದ್ದಿಮೆಗೆ ಪಾಲಿಕೆಯಿಂದ ಉದ್ದಿಮೆ ಪರವಾನಿಗೆಯನ್ನು ಪಡೆದಿರುವ ಬಗ್ಗೆ ಹಿರಿಯ ಆರೋಗ್ಯ ಪರಿವೀಕ್ಷಕರು ರವರು ಮಾಹಿತಿ ನೀಡಿರುತ್ತಾರೆ. ಇನ್ನುಳಿದ ಎರಡು ನಿವೇಶನಗಳಲ್ಲಿ ನಡೆಸುತ್ತಿರುವ ಮರಳು ಮಾರಾಟದ ಬಗ್ಗೆ ಸ್ಥಳ ಪರಿಶೀಲಿಸಿ ವರದಿ ನೀಡುವುದಾಗಿ ಹಿರಿಯ ಆರೋಗ್ಯ ಪರಿವೀಕ್ಷಕರು ತಿಳಿಸಿರುತ್ತಾರೆ ಹಾಗೂ **KSPCB norms ಅನುಸಾರ ಕ್ರಮ ವಹಿಸಲು ಮೂರು ವ್ಯಾಪಸ್ಥರಿಗೆ ನೊಟೀಸ್ ನೀಡಲು** ಹಿರಿಯ ಆರೋಗ್ಯ ಪರಿವೀಕ್ಷಕರು ರವರಿಗೆ ಸೂಚಿಸಲಾಯಿತು. | (II) ಮುಂದಿನ ಸಭೆಯಲ್ಲಿ ಸ್ಥಳ ಪರಿಶೀಲನಾ ವರದಿ ಮತ್ತು ನೊಟೀಸ್ ನೀಡುವುದು. |
| (III) BWSSB ರವರು ಕುಡಿಯುವ ನೀರಿನ ಸಂಪರ್ಕವನ್ನು ರಾಯಲ್ ಕೌಂಟಿ ಲೇಔಟ್ ನಲ್ಲಿರುವ ಸುಮಾರು 500 ಮನೆಗಳಿಗೆ ಒದಗಿಸಲು ಕ್ರಮವಹಿಸುವುದು ಹಾಗೂ BDA ಬಡಾವಣೆ ಯಲ್ಲಿ Booster Pump ಗಳನ್ನು ಅಳವಡಿಸಲು ಅಗತ್ಯ ಕ್ರಮ ವಹಿಸುವುದು. | AEE, BWSSB ರವರು ಯೋಜನಾ ಅನುಸಾರ ಅಗತ್ಯ ಕ್ರಮ ವಹಿಸುವುದು. | ಮುಂದಿನ ಸಭೆಯಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸುವುದು. |
| **3.(I) ಶ್ರೀ ಸೀತಾರಾಮ್ ಅಧ್ಯಕ್ಷರು, Classic Orchards ರವರು** | (I) AEE/AE ರವರು ಸ್ಥಳ | ಪ್ರಗತಿಯ ವಿವರಗಳನ್ನು ಮುಂದಿನ ಸಭೆಯಲ್ಲಿ |

Scanned by CamScanner

| | | |
|---|---|---|
| ಮಾತನಾಡುತ್ತಾ ನಮ್ಮ ಬಡಾವಣೆಯಲ್ಲಿ ನಗರೋತ್ಥಾನ ಯೋಜನೆಯಡಿ ರಸ್ತೆ ಕಾಮಗಾರಿಯು ಸುಮಾರು 75% ಪ್ರಗತಿಗೊಂಡಿದ್ದು, ಬಾಕಿ 25% ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕೋರಿರುತ್ತಾರೆ. | ಪರಿಶೀಲಿಸಿ ಸಂಬಂಧಪಟ್ಟ ಗುತ್ತಿಗೆದಾರರಿಗೆ ಶೀಘ್ರವಾಗಿ ಕಾಮಗಾರಿಯನ್ನು ಪೂರ್ಣಗೊಳಿಸಲು ಸೂಚಿಸಲಾಯಿತು. | ಸಲ್ಲಿಸುವುದು. |
| (II) ಬಡಾವಣೆಯ ಸುಮಾರು 20 ಖಾಲಿ ನಿವೇಶನಗಳಲ್ಲಿ ವಸತಿ ನಿರ್ಮಾನ ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಟ್ಟಡಗಳ Building Bye Laws ರನ್ವಯ ನಿಯಮಾನುಸಾರ ನಿರ್ಮಾಣವಾಗುತ್ತಿರುವ ಬಗ್ಗೆ ಪಾಲಿಕಯ ಸಂಬಂಧಪಟ್ಟ ಅಧಿಕಾರಿಗಳು ಖಾತರಿ ಪಡಿಸಿಕೊಳ್ಳಲು ಕೋರಿರುತ್ತಾರೆ. | ಸಹಾಯಕ ಅಭಿಯಂತರರು ಸಂಬಂಧಪಟ್ಟ ಸಹಾಯಕ ನಿರ್ದೇಶಕರು (ನಗರ ಯೋಜನೆ) ರವರೊಂದಿಗೆ ಸ್ಥಳ ಪರಿಶೀಲಿಸಿ ನಿಯಮಾನಸಾರ ಅಗತ್ಯ ಕ್ರಮವಹಿಸಲು ಸೂಚಸಿಲಾಯಿತು. | ಅನುಪಾಲನಾ ವರದಿಯನ್ನು ಮುಂದಿನ ಸಭೆಯಲ್ಲಿ ಸಲ್ಲಿಸುವುದು. |
| **4. ಶ್ರೀ ಶಿವಕುಮಾರ್ ಗೌಡ, ಜೆ.ಪಿ. ನಗರ 9ನೇ ಹಂತ ರವರು ಈ ಕೆಳಕಂಡ ಸಮಸ್ಯೆಗಳ ಬಗ್ಗೆ ಮಾತನಾಡಿದರು:-** | | |
| (I) BWSSB ರವರಿಂದ ನಿರ್ಮಾಣವಾಗಿರುವ UGD ಕಾಮಗಾರಿಯಲ್ಲಿ ಕೆಲವು Man hole ಗಳು ದುರಸ್ಥಿಗೊಂಡಿದ್ದು, Covering Lid ಗಳನ್ನು ದುರಸ್ಥಿಪಡಿಸಲು ಹಾಗೂ ಕಾಮಗಾರಿಯನ್ನು ಪೂರ್ಣಗೊಳಿಸಲು BWSSB ರವರು BDA ಠೇವಣಿ ಮೊತ್ತವನ್ನು ಪಡೆದು ಕ್ರಮ ವಹಿಸಲು ಕೋರಿರುತ್ತಾರೆ. | AEE, BWSSB ರವರು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಮನ್ವಯ ಸಾಧಿಸಿ ಠೇವಣಿ ಮೊತ್ತವನ್ನು ಪಡೆದು ಒಳಚರಂಡಿ ಕಾಮಗಾರಿಯನ್ನು ಆದ್ಯತೆಯ ಮೇಲೆ ಪೂರ್ಣಗೊಳಿಸಲು ಸೂಚಿಸಲಾಯಿತು. | ಮುಂದಿನ ಸಭೆಯಲ್ಲಿ ಪ್ರಗತಿ ವರದಿಯನ್ನು ಸಲ್ಲಿಸುವುದು. |
| (II) 80 feet Road, H.M World City ಹತ್ತಿರ ಖಾಲಿ ನಿವೇಶನಗಳಲ್ಲಿ ಮಾಂಸ ತ್ಯಾಜ್ಯವನ್ನು ಎಸೆಯುತ್ತಿದ್ದು, ಸಾರ್ವಜನಿಕರಿಗೆ ಓಡಾಡಲು ತೊಂದರೆ ಉಂಟಾಗುತ್ತಿದ್ದು, ಸದರಿ ಸಮಸ್ಯೆಗೆ ಪರಿಹಾರ ನೀಡಲು ಕೋರಿರುತ್ತಾರೆ. | ಆರೋಗ್ಯ ಪರಿವೀಕ್ಷಕರು ರವರು ಪರಿಶೀಲಿಸಿ ಸ್ವಚ್ಛತೆಗೆ ಕ್ರಮವಹಿಸಿ ಅಕ್ಕ ಪಕ್ಕವಿರುವ ಚಿಕನ್/ಮಾಂಸ ಮಾರಾಟ ಮಳಿಗೆದಾರರಿಗೆ ನೋಟೀಸ್ ನೀಡಲು ಸೂಚಿಸಲಾಯಿತು. | ಮುಂದಿನ ವಾರದಲ್ಲಿ ಸ್ವಚ್ಛತಾ ಕಾರ್ಯ ಪೂರ್ಣಗೊಳಿಸುವುದು ಹಾಗೂ ನೋಟೀಸ್ ಜಾರಿಗೊಳಿಸುವುದು. |

Scanned by CamScanner

| | | |
|---|---|---|
| (III) BDA ಬಡಾವಣೆಯಲ್ಲಿ ಎರಡು ಜಾಗಗಳಲ್ಲಿ ಪಾರ್ಕ್ ನಿರ್ಮಾಣ ಮಾಡಲು ಅಗತ್ಯ ಕ್ರಮ ಕೈಗೊಳ್ಳಲು ಕೋರಲಾಯಿತು. | ತೋಟಗಾರಿಗೆ ಅಧೀಕ್ಷಕರು ಸದರಿ ವಿಷಯದ ಬಗ್ಗೆ ಅಗತ್ಯ ಕ್ರಮ ವಹಿಸಲು ಸೂಚಿಸಲಾಯಿತು. | ಮುಂದಿನ ಸಭೆಯಲ್ಲಿ ಅನುಪಾಲನಾ ವರದಿಯನ್ನು ಸಲ್ಲಿಸುವುದು. |

ಈ ಮೇಲ್ಕಂಡ ಎಲ್ಲಾ ವಿಷಯ/ಸಮಸ್ಯೆಗಳನ್ನು ಮುಂದಿನ ಸಭೆಯೊಳಗಾಗಿ ನಿವಾರಣೆ ಮಾಡಿ ಅನುಪಾಲನೆ ವರದಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಕಡ್ಡಾಯವಾಗಿ ಕಳುಹಿಸಿಕೊಡಬೇಕಾಗಿ ಈ ಮೂಲಕ ಸೂಚಿಸುತ್ತಾ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಕಾರ್ಯದರ್ಶಿಗಳು
ಹಾಗೂ ಹಿರಿಯ ಆರೋಗ್ಯ ಪರಿವೀಕ್ಷಕರು
ವಾರ್ಡ್ ಸಂಖ್ಯೆ: 194.

ಪ್ರತಿಯನ್ನು:-

1. ಮಾನ್ಯ ಆಯುಕ್ತರು ರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸಿದೆ.
2. ಮಾನ್ಯ ವಿಶೇಷ ಆಯುಕ್ತರು (ಯೋಜನೆ) ರವರ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸಿದೆ.
4. ಜಂಟಿ ಆಯುಕ್ತರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
5. ಮುಖ್ಯ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನೆಗೆ ಸಲ್ಲಿಸಿದೆ.
6. ಅಧೀಕ್ಷಕ ಅಭಿಯಂತರರು (ಬೊಮ್ಮನಹಳ್ಳಿ) ರವರ ಅವಗಾಹನಗೆ ಸಲ್ಲಿಸಿದೆ.
7. ಕಾರ್ಯಪಾಲಕ ಅಭಿಯಂತರರು, ಬಿಬಿಎಂಪಿ, ಗೊಟ್ಟಿಗೆರೆ ರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ.
8. ಸಹಾಯಕ ಕಾರ್ಯಪಾಲಕ ಅಭಿಯಂತರರು, BWSSB, ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
9. ಸಹಾಯಕ ನಿರ್ದೇಶಕರು (ಪಶುಪಾಲನೆ), ಗೊಟ್ಟಿಗೆರೆ ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸದೆ.
10. ಕಾರ್ಯಪಾಲಕ ಅಭಿಯಂತರರು, ವಿದ್ಯುತ್ (ಬೊಮ್ಮನಹಳ್ಳಿ) ವಲಯ ಬಿಬಿಎಂಪಿ.
11. ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ.
12. ಕಾರ್ಯಪಾಲಕ ಅಭಿಯಂತರರು, ರಸ್ತೆ ಮತ್ತು ಮೂಲಭೂತ ಸೌಕರ್ಯಗಳು, ಬಿಬಿಎಂಪಿ.
13. ಕಾರ್ಯಪಾಲಕ ಅಭಿಯಂತರರು, ಕೆರೆಗಳ ವಿಭಾಗ ಬಿಬಿಎಂಪಿ.
14. ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ಬಿಬಿಎಂಪಿ.
15. ತೋಟಗಾರಿಕೆ ಅಧೀಕ್ಷಕರು, ಬೊಮ್ಮನಹಳ್ಳಿ ವಲಯ.
16. ಆರೋಗ್ಯ ವೈದ್ಯಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
17. ಕಾಂಟ್ರಾಕ್ಟ್ ಟ್ರೇಸಿಂಗ್ ನೋಡೆಲ್ ಅಧಿಕಾರಿ, ಅಂಜನಾಪುರ ವಿಭಾಗ
18. ಹೋಮ್ ಕ್ವಾರೆಂಟೈನ್ ಸ್ಕ್ವಾಡ್ ನೋಡೆಲೆ ಅಧಿಕಾರಿ ಅಂಜನಾಪುರ ವಿಭಾಗ.
19. ಆರೋಗ್ಯ ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ
20. ಸಹಾಯಕ ಕಾರ್ಯಪಾಲಕ ಅಭಿಯಂತರರು ಘನತ್ಯಾಜ್ಯ ನಿರ್ವಹಣಾ ವಿಭಾಗ.
21. ಸಹಾಯಕ ಕಂದಾಯ ಅಧಿಕಾರಿ ಅಂಜನಾಪುರ ವಿಭಾಗ.
22. ಕಲ್ಯಾಣಾಧಿಕಾರಿಗಳು ಬೊಮ್ಮನಹಳ್ಳಿ ವಲಯ.
23. ಉಪವಲಯ ಅರಣ್ಯ ಸಂರಕ್ಷಣಾಧಿಕಾರಿಗಳು, ಬೊಮ್ಮನಹಳ್ಳಿ ವಲಯ.
24. ಪೋಲೀಸ್ ಇನ್ಸ್‌ಪೆಕ್ಟರ್, ಹುಳಿಮಾವು ಮತ್ತು ಕೋಣನಕುಂಟೆ ಪೋಲೀಸ್ ಠಾಣೆ.

Scanned by CamScanner

[illegible]. ಕಂದಾಯ ಅಧಿಕಾರಿಗಳು, ಅಂಜನಾಪುರ ಉಪ ವಲಯ.

26. ಸ್ಥಳೀಯ ನಾಗರಿಕ ಕಲ್ಯಾಣ ಸಂಸ್ಥೆಗಳು.

Scanned by CamScanner